# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 110/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಶಿವಕುಮಾರ ಬಿ ಎಂ. | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇಟ್ ಬಿ ಎಂ ಮಾದಯ್ಯ | | **08.11.2021** |
| **ವಯಸ್ಸು** | ಃ 39 ವರ್ಷ | | |
| **ವೃತ್ತಿ** | ಃ ಎಫ ಡಿ ಎ | **ಪ್ರಾ.ಸಾ.** | ಃ 19 |
| **ವಾಸಸ್ಥಳ** | ಃ ಗುಂಡ್ಲುಪೇಟೆ | **ಚಾ.ಸಾ.** | ಃ 34 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

*1.* ನಾನು ಕಳೆದ *12* ವರ್ಷಗಳಿಂದ ಇ ಎಸ್ ಐ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಡಿಸೆಂಬರ್ *2016* ರಂದು *ಬೆ.09.15-09.30* ರ ವೇಳೆಗೆ ನನ್ನನ್ನು ಮತ್ತು ಶ್ರೀ ಸಂದೇಶ್ ಅವರನ್ನು ವಿವಿ ಪುರಂ ಪೊ.ಠಾಣೆಗೆ ಕರೆದುಕೊಂಡು ಹೋಗಿದ್ದು ಶ್ರೀ ಕೃಷ್ಣ ಅವರ ಕೊಲೆಯ ಸಂಬಂಧ ಮಹಜರ್ ಮಾಡುವ ಬಗ್ಗೆ ತಿಳಿಸಿದ್ದರು. ಪೊ. ಠಾಣೆಯಲ್ಲಿ ನಮಗೆ ಯಾವುದೇ ವ್ಯಕ್ತಿಗಳನ್ನು ತೋರಿಸಿಲ್ಲ. ನಾನು ಮತ್ತು ಶ್ರೀ ಸಂದೇಶ್ ಹಾಗೂ ಕೆಲವು ಪೋಲಿಸ್ ಸಿಬ್ಬಂದಿ ಜೀಪಿನಲ್ಲಿ ಇದ್ದು ಇತರೇ ವ್ಯಕ್ತಿಗಳು ಮತ್ತೊಂದು ಪೋಲಿಸ್ ಜೀಪಿನಲ್ಲಿ ಮೊದಲೇ ಕುಳಿತಿದ್ದರು. ನಂತರ ನಮ್ಮಗಳನ್ನು ಬೆಂಗಳೂರು ರಸ್ತೆಯಲ್ಲಿ ಶ್ರೀರಂಗಪಟ್ಟಣ ದಾಟಿ ಸೇತುವೆ ಬಳಿ ಪೋಲಿಸರು ಬರವಣಿಗೆ ಮಾಡಿಕೊಂಡು ಫೋಟೋ ತೆಗೆದುಕೊಂಡಿದ್ದಾರೆ. ನಿಪಿ-*18* ರಲ್ಲಿ ನಿಪಿ-*18(ಬಿ)* ನಂತೆ ಸಹಿ ಪಡೆದಿದ್ದಾರೆ. ನಿಪಿ-*17* ಫೋಟೋದಲ್ಲಿ ನಾನು ಕಂಡು ಬರುತ್ತೇನೆ. ಪೋಲಿಸ ವಾಹನದಲ್ಲಿ ಇದ್ದ ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲ. ಅಂದು ಪೋಲಿಸ ಠಾಣೆಯಲ್ಲಿ ನನಗೆ ತೋರಿಸಿದ ವ್ಯಕ್ತಿಗಳನ್ನು ಗುರುತಿಸಲು ಆಗುವುದಿಲ್ಲ. ನಂತರ ಶ್ರೀರಂಗಪಟ್ಟಣದಿಂದ ಮಳವಳ್ಳಿ ಕಡೆಗೆ ಕರೆದುಕೊಂಡು ಹೋಗಿದ್ದರು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***SC No.110/2017***
***PW-19, CW-34***

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು.***